ದಿನಾಂಕ 11-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಜಿ.ಎಸ್.ಆರ್.ಕೆ. ರೆಡ್ಡಿ ವಕೀಲರಿಂದ

ನಾನು ಸರ್ವೆ ನಂ. 103 ರಲ್ಲಿ ನನ್ನ ಮಗನ ಹೆಸರಿಗೆ 1 ಎಕರೆ 20 ಗುಂಟೆ ಮತ್ತು 2 ಎಕರೆ 10 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ. ಅದೇರೀತಿ ಸರ್ವೆ ನಂ. 104 ರಲ್ಲಿ 2 ಎಕರೆ 10 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ. ಒಟ್ಟು ನಾನು ದಾವಾ ಶೆಡ್ಯೂಲ್‌ನಲ್ಲಿ ತೋರಿಸಿದಂತೆ 5 ಎಕರೆ 30 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ಎಕರೆ ಜಮೀನನ್ನು ಖರೀದಿ ಮಾಡಿರುತ್ತೇನೆಂದು

ನುಡಿಯುತ್ತಾರೆ. ಅದೇರೀತಿ ನಾನು 6 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇನೆ. ಸದರಿ ಆಸ್ತಿಗಳನ್ನು ಖರೀದಿ ಮಾಡಿದ ನಂತರ ನಾನು ಸರ್ಕಾರದ ಸರ್ವೆಯರ್‌ರವರಿಂದ ಮತ್ತು ಸರ್ಕಾರದ ಇಲಾಖೆಗಳಿಂದ ಸರ್ವೆ ಮಾಡಿಸಿಲ್ಲ. ನನ್ನ ದಾವಾ ಶೆಡ್ಯೂಲ್‌ನಲ್ಲಿ ತೋರಿಸಿದ ಹೊಲ ಬಿಟ್ಟು ಪ್ರತಿವಾದಿಗೆ ಸೇರಿದೆ ಎನ್ನಲಾದ 2 ಎಕರೆ 12 ಗುಂಟೆ ಜಮೀನಿನ ಹೆಚ್ಚಿನ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಜಮೀನಿನ ಪಕ್ಕದಲ್ಲಿರುವ ಜಮೀನನ್ನು ಖರೀದಿ ಮಾಡಿರುತ್ತಾರೆ. ಸದರಿ ಪ್ರತಿವಾದಿಗಳು ಸಹ ಸರ್ವೆ ನಂ. 103 ಮತ್ತು 104 ಗಳಲ್ಲಿ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ತಮ್ಮ ತಂದೆಯಾದ ಸೀತಯ್ಯರವರಿಂದ 4 ಎಕರೆ 26 ಗುಂಟೆಗಳಲ್ಲಿ ತಲಾ 2 ಎಕರೆ 13 ಗುಂಟೆ ಜಮೀನನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಸೀತಯ್ಯ ಈತನು 1999-2000 ನೇ ಸಾಲಿನಲ್ಲಿ ಸರ್ವೆ ನಂ. 103 ರಲ್ಲಿ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಪ್ರತಿವಾದಿಗಳು ಸರ್ವೆ ನಂ. 103 ಮತ್ತು 104 ರಲ್ಲಿ ಇತರೆ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸರ್ವೆ ನಂ. 103 ರಲ್ಲಿ 16 ಗುಂಟೆ ಮತ್ತು ಸರ್ವೆ ನಂ. 104 ರಲ್ಲಿ 1 ಎಕರೆ 26 ಗುಂಟೆ ಜಮೀನುಗಳನ್ನು ಪ್ರತ್ಯೇಕವಾಗಿ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 2 ರವರು ಸರ್ವೆ ನಂ. 4 ರಲ್ಲಿ 2 ಎಕರೆ 2 ಗುಂಟೆ ಜಮೀನಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನಾದ ಗಣೇಶ ಈತನು ದಿ: 21-06-2004 ರಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದ ಎಂದರೆ ಸರಿ. ಅದೇ ದಿನ ಪ್ರತಿವಾದಿಗಳು ಸಹ ತಮ್ಮ ತಂದೆಯಿಂದ ಬಂದ ಆಸ್ತಿಗಳನ್ನು ಹೊರತುಪಡಿಸಿ ಪ್ರತ್ಯೇಕವಾಗಿ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ತಲಾ 4 ಎಕರೆ 15 ಗುಂಟೆರಂತೆ ಜಮೀನುಗಳು ಇರುತ್ತವೆ

ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಒಟ್ಟು 8 ಎಕರೆ 30 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ತಮಗೆ ಸೇರಿದ ಜಮೀನುಗಳನ್ನು ಸರ್ವೆ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಸರ್ವೆ ನಂ. 104/4 ನೇದ್ದರಲ್ಲಿ ಗಣೇಶ 1 ಎಕರೆ 16 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾನೆಂದು ಸರ್ವೆಯರ್‌ರವರು ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇರೀತಿ ಸರ್ವೆ ನಂ. 104/5 ನೇದ್ದರಲ್ಲಿ ಗಣೇಶ ಈತನು 36 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾನೆ ಅಂತಾ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿಗಳಿಗೆ ಸೇರಿದೆ ಎನ್ನಲಾದ ಒಟ್ಟು 2 ಎಕರೆ 12 ಗುಂಟೆರ ಜಮೀನನ್ನು ಗಣೇಶ ಈತನು ಒತ್ತುವರಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಪ್ರಶ್ನೆ: ಸರ್ವೆಯರ್‌ರವರು ಹಾಕಿ ಹೋದಂತಹ ಕಲ್ಲುಗಳನ್ನು ನಾನು ಮತ್ತು ಗಣೇಶ ಸೇರಿ ನಮ್ಮ ಹೊಲದಲ್ಲಿ ಹಾಕಿರುತ್ತಾರೆಂದು ತಿಳಿದು ಕಿತ್ತುಹಾಕಿರುತ್ತೀರಿ ಎಂಬ ಪ್ರಶ್ನೆಗೆ?

ಉತ್ತರ: ಸರ್ವೆಯರ್‌ರವರು ನಮಗೆ ಹೇಳದೇ ಮತ್ತು ತಿಳಿಸದೇ ಕಲ್ಲುಗಳನ್ನು ಹಾಕಿರುತ್ತಾರೆ, ಆದ್ದರಿಂದ ನಾವು ಕಿತ್ತಿಹಾಕಿರುತ್ತೇವೆ ಎಂದು ಉತ್ತರಿಸುತ್ತಾರೆ.

ಸರ್ವೆಯರ್‌ರವರು ಸರ್ವೆ ಮಾಡುವ ಪೂರ್ವದಲ್ಲಿ ನಮಗೆ ಅಂಚೆ ಮೂಲಕ ನೋಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸರ್ವೆ ಸಂದರ್ಭದಲ್ಲಿ ನಾನು ಸಹ ಹಾಜರಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿಗಳಗಿಎ ಸೇರಿದ 2 ಎಕರೆ 12 ಗುಂಟೆ ಜಮೀನನ್ನು ನಾವು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸರ್ವೆಗಳನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿಲ್ಲ. ನಾವು ಒತ್ತುವರಿ ಮಾಡಿದ್ದೇವೆ ಎಂದು ಹೇಳಲಾದ ವಿಷಯವನ್ನು ಮನಗೊಂಡು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಸರ್ವೆ

ಪಂಚನಾಮೆಗೆ ನಮ್ಮ ಸಹಿ ಮಾಡಲು ನಿರಾಕರಿಸಿದ್ದೇವು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಸರ್ವೆಗೆ ಹಾಕಿದ್ದರು ಎಂಬ ವಿಷಯವನ್ನು ಬರೆಸಿದ್ದೇನೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗೆ ನೆನಪಿಲ್ಲ. ಅದೇರೀತಿ ಸರ್ವೆ ಮಾಡಲು ಸಂತೋಷ ಎನ್ನುವವರು ಬಂದಿದ್ದರು ಎಂದು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಇದ್ದಿಲ್ಲ ನನ್ನನ್ನು ಕರೆದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ನಮಗೆ ಸೇರಿದ 4 ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆಂದು ಬರೆಸಿಲ್ಲ. ಅದೇರೀತಿ ಸರ್ವೆಯರ್‌ರವರು ನಮಗೆ ನಾವು ಪ್ರತಿವಾದಿಗಳಿಗೆ ಸೇರಿದ 4 ಎಕರೆ ಜಮೀನನ್ನು ಒತ್ತುವರಿ ಮಾಡಿದ್ದೇವೆ ಎಂದು ಹೇಳಲಾದ ವಿಷಯಕ್ಕೆ ಸಂಬಂಧಿಸಿದಂತೆ ಅದನ್ನು ಬಿಟ್ಟುಕೊಡಬೇಕೆಂದು ಹೇಳಿರುವ ವಿಷಯವನ್ನು ಬರೆಸಿಲ್ಲ. ಅದೇರೀತಿ ಸಂತೋಷ ಎನ್ನುವ ಸರ್ವೆಯರ್‌ರವರಿಗೆ ಪ್ರತಿವಾದಿಗಳು ಲಂಚವನ್ನು ಕೊಟ್ಟು ಸರ್ವೆ ಮಾಡಿಸಿರುತ್ತಾರೆಂದು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ನಾವು ಕಲ್ಲುಗಳನ್ನು ಕಿತ್ತಿಹಾಕಿರುವ ವಿಷಯಗಳನ್ನು ನನ್ನ ವಕೀಲರಿಗೆ ಹೇಳಿರುತ್ತೇನೆ ಆದರೆ ಅದನ್ನು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುತ್ತಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಪ್ರತಿವಾದಿಗಳಿಗೆ ಸೇರಿದ 2 ಎಕರೆ 12 ಗುಂಟೆ ಜಮೀನನ್ನು ನಾವು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ಅದನ್ನು ನಾವು ಬಿಟ್ಟುಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿಗಳ ಸ್ವಾಧೀನಕ್ಕೆ ಮತ್ತು ಹಿಡುವಳಿಗೆ ನಾವು ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಕಲ್ಲು ಹಾಕಿ ತೊಂದರೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳಿಗೆ ಸೇರಿದೆ ಎಂದು ಹೇಳಲಾದ 2 ಎಕರೆ 12 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸರ್ವೆ ನಂ. 103 ಮತ್ತು 104 ರಲ್ಲಿ 8 ಎಕರೆ 30 ಗುಂಟೆ ಜಮೀನಿನ ಮಾಲೀಕರು ಇರುತ್ತಾರೆ ಎಂದರೆ ಸರಿಯಲ್ಲ. ಗಣೇಶ ಈತನ ಹೊಲ ಪ್ರತಿವಾದಿಗಳ ಪಶ್ಚಿಮದ ದಿಕ್ಕಿನಲ್ಲಿ ಬರುತ್ತದೆ ಎಂದರೆ ಸರಿ. ಪ್ರತಿವಾದಿಗಳ

ಮತ್ತು ನಮ್ಮ ಜಮೀನುಗಳು ಒಂದೇ ಬದುವಿನಲ್ಲಿ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನಂ. 2 ಮತ್ತು 3 ನೇ ವಾದಿಗೂ ಮತ್ತು ಪ್ರತಿವಾದಿಗಳ ಹೊಲಕ್ಕೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಮತ್ತು 3 ನೇ ವಾದಿಯರು ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ. 2 ನೇ ಮತ್ತು 3 ನೇ ವಾದಿಗಳಿಗೆ ಪ್ರತಿವಾದಿಗಳ ಆಸ್ತಿಯಲ್ಲಿ ಯಾವುದೇ ಹಿತಾಸಕ್ತಿ ಮತ್ತು ಹಕ್ಕು ಇರುವುದಿಲ್ಲ ಎಂದರೆ ಸರಿ. ಒತ್ತುವರಿಯನ್ನು ಮುಚ್ಚಿಟ್ಟು ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.